## 16

# ಸುವಾರ್ತೆಯನ್ನು ಹಂಚಿಕೊಂಡ ಮನುಷ್ಯರು

## (2 ಅರಸು 7:3-16)

ನಮ್ಮ ಹಿಂದಿನ ಪಾಠವು ಸಮಾರ್ಯದಲ್ಲಿ ಅರಾಮ್ಯರಿಂದ ಉಂಟಾದ ಆಕ್ರಮಣದ ಸುತ್ತಲೂ ಆವೃತ್ತವಾಗಿದೆ. ಆಹಾರದ ಕೊರತೆಯು ಯಾವಾಗ ಆಗುತ್ತಾ ಹೋಯಿತೋ, ಪಟ್ಟಣದಲ್ಲಿ ನಿರಾಶೆಯು ಉಂಟಾಯಿತು. ಆಹಾರದ ಕೊರತೆಯನ್ನು ನೀಗಿಸುವುದಕ್ಕೋಸ್ಕರ ತಮ್ಮ ಹುಚ್ಚುತನದ ಪ್ರಯತ್ನದಲ್ಲಿ ಅವರು ದೇವರಿಗೆ ಮತ್ತು ಸೃಷ್ಟಿಗೆ ಎರಡಕ್ಕೂ ವಿರುದ್ಧವಾಗಿ ಪಾಪಮಾಡಿದರು.

ಆ ಹಸಿದವರಲ್ಲಿ ನಾಲ್ಕು ಜನ ಕುಷ್ಠರೋಗಿಗಳಿದ್ದರು. ಈ ಪಾಠವು ಆ ನಾಲ್ಕು ವ್ಯಕ್ತಿಗಳ ಮೇಲೆ ಕೇಂದ್ರಿಕರಿಸುವಂತದ್ದಾಗಿದೆ. ನಾನು ಅವರನ್ನು "ಶುಭವಾ ರ್ತೆಯನ್ನು ಹಂಚಿಕೊಂಡ ಜನರು" ಎಂದು ಕರೆಯುತ್ತೇನೆ. ನಾವು ಈ ಕಥೆಯನ್ನು ಪುನರಾವರ್ತಿಸಿದಂತೆ, ಇಂದು ನಾನು ಮತ್ತು ನೀನು ಶುಭವಾರ್ತೆಯನ್ನು ಹಂಚಿಕೊಳ್ಳುವುದಕ್ಕೆ ಜವಾಬ್ದಾರರಾಗಿದ್ದೇವೆ ಎಂಬುದನ್ನು ನಾನು ಒತ್ತಿ ಹೇಳುವವನಾಗಿದ್ದೇವೆ.

## ಆಗಿನ ಶುಭವಾರ್ತೆ (7:3-16)

**ಅವರಿಗೆ ಶುಭವಾರ್ತೆ**

"ಊರಬಾಗಿಲಿನ ಹತ್ತಿರ ನಾಲ್ಕುಮಂದಿ[1] ಕುಷ್ಠರೋಗಿಗಳಿದ್ದರು" (ವಚನ 3ಎ). ಮೇಲಿನ ನಮ್ಮ ಪಾಠದಲ್ಲಿ, ನಾವು ಭಯಂಕರ ರೋಗವಾದ ನಾಮಾನನ ಕುಷ್ಠದ ಬಗೆಗೆ ಚರ್ಚಿಸಿದ್ದೇವೆ. ಇಸ್ರಾಯೇಲ್ಯರನಲ್ಲಿ, ಕುಷ್ಟರೋಗಿಗಳಿಗೆ ಊರಿನಲ್ಲಿ, ಪಟ್ಟಣಗಳಲ್ಲಿ ಪ್ರವೇಶ ವಿರಲಿಲ್ಲ (ನೋಡಿರಿ ಯಾಜಕಕಾಂಡ 13:46; ಅರಣ್ಯಕಾಂಡ 5:2, 3). ಈ ನಾಲ್ಕು ಅ ಜನರು ಆ ಊರ ಬಾಗಿಲಿನ ಬಳಿ ಗುಂಪುಗೂಡಿ ಜನರ ಬರುವಿಕೆಯ ಮತ್ತು ಆಹಾರದ ಚೂರನ್ನು ಎಸೆಯುವ ನಿರೀಕ್ಷೆಯಿಂದ ನಿಂತಿರುತ್ತಿದ್ದರು. ಈಗ ಹೇಗೋ, ಯಾವ ಆಹಾರದ ಎಸೆಯುವಿಕೆಯು ಅಲ್ಲಿರಲಿಲ್ಲ. ಅದರಂತೆ ಪಟ್ಟಣದಲ್ಲಿ, ಕುಷ್ಠರೋಗಿಗಳು ಹಸಿವಿನಿಂದ ಸಾಯುತ್ತಿದ್ದರು.

ನಾಲ್ಕು ಜನರು ಆಲೋಚನೆಗೆ ಸೇರಿ ಬಂದರು: "ನಾವು ಸಾಯುವತನಕ ಇಲ್ಲೇ ಕೂತಿರಬೇಕೋ?" (2 ಅರಸು 7:3ಬಿ). *ಏನನ್ನಾದರೂ* ಮಾಡುವದು ಅವರಿಗೆ ಅವಶ್ಯವಿತ್ತು, ಮತ್ತು ಅದನ್ನು *ಬೇಗನ್ನೆ* ಮಾಡಲೇಬೇಕಿತ್ತು. "ಪಟ್ಟಣದಲ್ಲಿ ಬರವಿರುವುದರಿಂದ ಅಲ್ಲಿ ಹೋದರೂ ಸಾಯಬೇಕು. ಇಲ್ಲಿಯೇ ಕೂತಿದ್ದರೂ ಸಾಯ ಬೇಕು" (ವಚನ 4ಎ). ಪಟ್ಟಣದ ಒಳಗಡೆ ಹೋಗುವುದಾದರೂ ಸಹ ಅವರ ಪರಿಸ್ಥಿತಿಯು ಸರಿಯಾಗಿರುತ್ತಿರಲಿಲ್ಲ. ಹೇಗೋ, ಅವರು ಇದ್ದಲ್ಲಿಯೇ ಇರುವುದೆಂದರೂ ಅದು ಮರಣವೇ ಆಗಿತ್ತು (ವಚನ 4ಬಿ).

ಅಂತಿಮವಾಗಿ, ಕುಷ್ಠರೋಗಿಗಳು "ಆದುದರಿಂದ ಹೊರಟುಹೋಗಿ ಅರಾಮ್ಯರ ಪಾಳಯವನ್ನು ಸೇರೋಣ. ಅವರು ನಮ್ಮನ್ನು ಉಳಿಸಿವುದಾದರೆ ಉಳಿಸಲಿ, ಕೊಲ್ಲುವುದಾದರೆ ಕೊಲ್ಲಲಿ" (ವಚನ 4ಸಿ) ಎಂದು ನಿರ್ಧರಿಸಿದರು. ಇನ್ನೊಂದು ಮಾತಿನಲ್ಲಿ "ಬಲು ಕೆಟ್ಟದೆಂದರೆ ಅವರು ನಮ್ಮನ್ನು ಕೊಲ್ಲಬಹುದು, ಮತ್ತು ನಾವು ಹೇಗೆ ಆಗಲಿ ಸಾಯಲೇ ಬೇಕಲ್ಲವೇ. ಇನ್ನೊಂದೆಡೆಯಲ್ಲಿ, ಯಾರು ಬಲ್ಲರು? ಬಹುಶಃ ಅವರು ನಮ್ಮನ್ನು ಖೈದಿಗಳಾಗಿ

ತೆಗೆದುಕೊಂಡು ಹೋಗಬಹುದು ಮತ್ತು ಊಟ ಹಾಕಬಹು ದಲ್ಲವೇ.''

ಹೀಗೆ, ''ಅವರು ಅರಾಮ್ಯರ ಪಾಳೆಯಕ್ಕೆ ಹೊರಟರು'' (ವಚನ 5ಎ) ಲೇಖಕರು ಊಹಿಸುವುದೇನೆಂದರೆ ಆ ಜನರು ಮುಸ್ಸಂಜೆಯಲ್ಲಿ ಅಲ್ಲಿ ಹೋದರು, ಆದರೆ ವಿವರಣೆಯು ಸರಳವಾಗಿದೆ: ಅವರು ನಿರ್ಧಾರಕ್ಕೆ ಬರುತ್ತಿದ್ದಂತೆಯೇ ಅವರು ತಕ್ಷಣವೇ ಕಾರ್ಯೋನ್ಮುಖರಾದರು.

ಕುಷ್ಠರೋಗಿಗಳು ಪಟ್ಟಣದ ಬಾಗಿಲನ್ನು ಬಿಟ್ಟು ಹೋಗುವಾಗ ಅವರು ಅಧೈರ್ಯಗೊಂಡಿದ್ದರು ಎಂಬುದರಲ್ಲಿ ಸಂಶಯವೇ ಇಲ್ಲ. ಯಾವುದೇ ಸಮಯದಲ್ಲಿ, ''ನಿಲ್ಲು! ಅಲ್ಲಿ ಹೋಗುತ್ತಿರುವವರು ಯಾರು?'' ಎಂಬುದನ್ನು ಕೇಳುವ ಪ್ರತೀಕ್ಷೆಯು ಅವರಿಗಿರಬಹುದು. ಅವರು ತಮ್ಮಷ್ಟಕ್ಕೆ ತಾವೇ ನೆಲದಮೇಲೆ ಬಿದ್ದು ಕರುಣೆಯನ್ನು ಬೇಡುವುದಕ್ಕೆ ಸಿದ್ಧರಿದ್ದರು.

ಅವರು ಡೇರೆಯೆಡೆಗೆ ಹೊರಟಂತೆ, ಆ ಡೇರೆಗಳಿಂದ ಯಾವುದೇ ಶಬ್ಧವೂ ಕೋಲಾಹಲವೂ ಕೇಳಿಬರಲಿಲ್ಲ (ನೋಡಿರಿ ವಚನ 7ಎ); ಆದರೆ ಅವರು ಆ ಸ್ಥಳವನ್ನು ತಲುಪಿದಾಗ, ಅಲ್ಲಿ ಶಾಂತತೆಯನ್ನು ಅವರು ಕಂಡರು (ನೋಡಿರಿ ವಚನ 10). ''ಅವರು ಪಾಳೆಯದ ಅಂಚಿಗೆ[2] ಬಂದಾಗ ಅಲ್ಲಿ ಒಬ್ಬನೂ ಕಾಣಿಸಲಿಲ್ಲ'' (ವಚನ 5ಬಿ). ಅವರನ್ನು ಹೀಗೆ ಊಹಿಸಿಕೊಳ್ಳಿರಿ, ಕತ್ತಲೆಯಲ್ಲಿ ಅತ್ತ ಇತ್ತ ಅವರು ಇಣುಕಿ ನೋಡುತ್ತಿದ್ದರು ಅರಸನ ಹಂಚಿಕೆಯಾಗಿರಬಹುದು (ನೋಡಿರಿ ವಚನ 12), ಇದೊಂದು ಮೋಸವಾಗಿರಬಹುದು; ಎಂದು ಕುಷ್ಠರೋಗಿಗಳು ಯೋಚಿಸಿರಬಹುದು, ಆದರೆ ನಿಜವಾಗಿಯೂ ಅಲ್ಲಿ ಯಾರೂ ಇರಲಿಲ್ಲ. ಆ ಡೇರೆಯು ಖಾಲಿಯಾಗಿತ್ತು.

''ಕರ್ತನು ಅರಾಮ್ಯರು ಪಾಳೆಯದವರಿಗೆ ರಥರಥಾಶ್ವ ಸಹಿತವಾದ ಮಹಾಸೈನ್ಯದ ಘೋಷವು ಕೇಳುವಂತೆ ಮಾಡಿದ್ದನು ಇಸ್ರಾಯೇಲ್ಯರ ಅರಸನು ಹಿತ್ತಿಯ, ಐಗುಪ್ತ ಇವುಗಳ ಅರಸನಿಗೆ ಹಣಕೊಟ್ಟು ಅವರನ್ನು ನಮಗೆ ವಿರೋಧವಾಗಿ ಕರೆತಂದಿದ್ದಾನೆ ಅಂದು ಕೊಂಡರು'' (ವಚನ 6). ಕೆಲ ವಿಮರ್ಶಕರು ಯೋಚಿಸುವುದೇನೆಂದರೆ ಕರ್ತನು ಹೇಗೆ ಇದನ್ನು ಮಾಡಿದನು ಎಂಬುದನ್ನು ವಿವರಿಸುವದು ಅವರ ಜವಾಬ್ದಾರಿಯಾಗಿತ್ತು ಎಂದು ತಿಳಿಯುತ್ತಾರೆ. ಕೆಲವರು ಈ ಘಟನೆಯನ್ನು ಸ್ವಾಭಾವಿಕ ಘಟನೆ ಎನ್ನುತ್ತಾರೆ. ಅರಾಮ್ಯರು ಸದ್ದನ್ನು ಕೇಳುವ ಹಾಗೆ ಮತ್ತು ಅವರಿಗೆ ಸಂಪೂರ್ಣವಾಗಿ ಮನವರಿಕೆ ಮಾಡುವಂತಹ ಅನುಭವಗಳು ಇವುಗಳಿಗೆ ದೇವರೇ ಜವಾಬ್ದಾರನೆಂದು ತಿಳಿಯಲು ವಿಶ್ವಾಸಿಗಳಿಗೆ ಇಷ್ಟೇ ಸಾಕು. ''ಯೆಹೋವನು ಅದ್ಭುತವಾದ ದೃಷ್ಯದ ಮೂಲಕ ಮೋವಾಬ್ಯರನ್ನು ಸೋಲಿಸಿದನು ([2 ಅರಸು] 3:20-23) ಮತ್ತು ಈಗ ಆತನು ಅದ್ಭುತವಾದ ಶಬ್ಧದ ಮೂಲಕ [ಅರಮೇನಿ ಯರನ್ನು] ಸೋಲಿಸಿದನು.''[3]

ಸೈನಿಕರು ಈ ಸದ್ದನ್ನು ಕೇಳಿದಾಗ, ಅವರು ''ಇಸ್ರಾಯೇಲ್ಯರ ಅರಸನು ಹಿತ್ತಿಯ, ಐಗುಪ್ತ[4] ಇವುಗಳ ಅರಸನಿಗೆ ಹಣಕೊಟ್ಟು ಅವರನ್ನು ನಮಗೆ ವಿರೋಧವಾಗಿ ಕರೆತಂದಿದ್ದಾನೆ ಅಂದುಕೊಂಡರು'' (ವಚನ 6). ''ಹಿತ್ತಿಯರು'' ಉತ್ತರ ಅರಾಮ್ಯದಲ್ಲಿರುವ ರಾಜ್ಯಗಳಲ್ಲಿನ ಮೂಲನಿವಾಸಿಗಳು ಆಗಿದ್ದು ಹಿತ್ತೀಯ[5] ಸಾಮ್ರಾಜ್ಯದ ಪತನದ ನಂತರ ಅರಾಮ್ಯವು ಪ್ರಖ್ಯಾತವಾಯಿತು. ಇಸ್ರಾಯೇಲ್ಯನ ಅರಸನು ತಮ್ಮೊಡನೆ ಯುದ್ಧಮಾಡುವುದಕ್ಕೆ ಉತ್ತರದಿಂದ ಹಿತ್ತಿಯರಿದ್ದಾಗ ದಕ್ಷಿಣದಿಂದ ಐಗುಪ್ತರಿಂದ ಹೊಡೆಯಲು ಕಂಡುಕೊಂಡಿದ್ದಾನೆ ಎಂಬ ಆಲೋಚನೆಗೆ ಅರಾಮ್ಯರು ಬಂದರು.

ಭಯದಿಂದ ತುಂಬಿದ್ದ, ಸೈನಿಕರು ''ಗುಡಾರಗಳನ್ನೂ ಕತ್ತೆಕುದುರೆಗಳನ್ನೂ ಪಾಳೆಯ ದಲ್ಲಿದೆಲ್ಲವನ್ನೂ ಬಿಟ್ಟುತಮ್ಮ ಜೀವರಕ್ಷಣೆಗಾಗಿ ಅದೇ ಸಾಯಂಕಾಲದಲ್ಲಿ [ಅದೇ ಸಮದಲ್ಲಿಯೇ ಕುಷ್ಠರೋಗಿಗಳು ತಮ್ಮ ಪಟ್ಟಣದಿಂದ ಹೊರಟಿರಬಹುದು] ಓಡಿಹೋಗಿದ್ದರು'' (ವಚನ 7). ಅವರು ಕುದುರೆಗಳ ಮೇಲೆ ವೇಗವಾಗಿ ಪ್ರಯಾಣಿಸುತ್ತಿದ್ದರು, ವಾಸ್ತವವೆಂದರೆ ಅವರು ತಮ್ಮ ಕುದುರೆಗಳನ್ನು ಬಿಟ್ಟು ಹೋದುದ್ದು ಅವರು ಎಷ್ಟು ಭಯಗ್ರಸ್ಥರಾಗಿದ್ದರು ಎಂಬುದನ್ನು

ಸೂಚಿಸುವುದಾಗಿದೆ.

ಕುಷ್ಠರೋಗಿಗಳು ಎಚ್ಚರಿಕೆಯಿಂದ ಡೇರೆಯನ್ನು ಪ್ರವೇಶಿಸಿದರು (ವಚನ 8ಎ). ಅಲ್ಲಿ ಬೆಂಕಿಯು ಉರಿಯುವುದನ್ನು ಮತ್ತು ಪ್ರಾಣಿಗಳಿಗೆ ಹಗ್ಗವನ್ನು ಕಟ್ಟಲ್ಪಟ್ಟಿರುವದನ್ನು ಬಹುಶಃ ಅವರು ನೋಡಿರಬಹುದು (ನೋಡಿರಿ ವಚನ 10), ಆದರೆ ಯಾರೊಬ್ಬ ಜನರೂ ಅಲ್ಲಿರಲಿಲ್ಲ. ತಮ್ಮ ತಲೆಯನ್ನು ಡೇರೆಗೆ ಹಚ್ಚಿದರು, ಊಟ ಸಿದ್ಧವಾಗಿರುವುದನ್ನು, ಊಣ್ಣದೆ ಬಿಟ್ಟದ್ದನ್ನು ಅವರು ಕಂಡರು! ಅವರು "ಉಂಡು ಕುಡಿದರು" (ವಚನ 8ಬಿ); ಆ ಆಹಾರವು ಎಂದಿಗೂ ಅಷ್ಟೊಂದು ರುಚಿಯಾಗಿರಲಿಲ್ಲ! ನಂತರ ಹುಡುಕಲು ಆರಂಭಿಸಿದರು "ಬೆಳ್ಳಿ, ಬಂಗಾರ, ಬಟ್ಟೆಗಳು" ಅಲ್ಲಿನ ಸಂಪತ್ತನ್ನು ದೋಚಿದರು ಮತ್ತು ಅದನ್ನು ಕತ್ತಲೆಯ ಪ್ರದೇಶಕ್ಕೆ ಒಯ್ದರು ಅಲ್ಲಿ ಅವರಿಗೆ ಮುಚ್ಚಿಡುವ ಸ್ಥಳವನ್ನು ಮಾಡಿಕೊಂಡರು. ಅವರು ಬೇಗನೆ ಹಿಂತಿರುಗಿ ಡೇರೆಯಿಂದ ಡೇರೆಗೆ ಧಾವಿಸಿದರು, ಪ್ರತಿಯೊಂದನ್ನೂ ಲೂಟಿಮಾಡಿದರು (ವಚನ 8ಸಿ). ಅವರಿಗೆ ಭಿಕ್ಷುಕರಲ್ಲ, ಅವರು ಶ್ರೀಮಂತರು!

**ಇತರರಿಗೆ ಶುಭವಾರ್ತೆ**

ಹೇಗೋ, ತಡಮಾಡಿಯಾದರೂ, ಅವರ ಆತ್ಮಸಾಕ್ಷಿಯು ಅವರನ್ನು ಎಚ್ಚರಿಸಿತು. ಅವರು ಇನ್ನೊಂದು ಚರ್ಚೆಯನ್ನು ಮಾಡಿದರು. "ಇದು ಶುಭವಾರ್ತೆಯ ದಿನವಾಗಿದೆ ಇದನ್ನು ಪ್ರಕಟಿಸದಿರುವದು ಒಳ್ಳೆಯದಲ್ಲ" (ವಚನ 9ಎ). ಅಲ್ಲಿ ಅವರು ಆಹಾರದೊಂದಿಗೆ ಇದ್ದರು ಅವರು ಹೆಚ್ಚು ಹೆಚ್ಚಾಗಿ ತಿನ್ನಬಹುದಿತ್ತು, ಆದರೆ ಪಟ್ಟಣದಲ್ಲಿನ ಜನರು ಇನ್ನೂ ಹಸಿವೆಯಿಂದ ಇದ್ದರು.

ಒಂದು ಪ್ರಾಯೋಗಿಕವಾದ ಸಂಗತಿಯು ಈ ಚರ್ಚೆಯಲ್ಲಿ ಪರಿಚಿತವಾಗುತ್ತದೆ: "ಬೆಳಗಾಗುವವರೆಗೆ ತಡಮಾಡಿದರೆ ಶಿಕ್ಷೆಗೆ ಪಾತ್ರರಾದೇವು" (ವಚನ 9ಬಿ). ಇದೊಂದು ಯೋಗ್ಯವಾದ ವಿಚಾರವಾಗಿತ್ತು. ಮುಂಜಾನೆಯು ಬಂದಾಗ, ವೈರಿಗಳು ಹೊರಟು ಹೋದದ್ದನ್ನು ಪಹರೆಯವರು ನೋಡಬಹುದು, ಆಗ ಸಹಜವಾಗಿ, ಕುಷ್ಠರೋಗಿಗಳು ಈ ಸುದ್ದಿಯನ್ನೂ ತಮ್ಮಲ್ಲಿಯೇ ಇಟ್ಟುಕೊಂಡರು ಎಂಬುದು ಜನರಿಗೆ ಗೊತ್ತಾಗಿಬಿಡುತ್ತಿತ್ತು. ಜನರಿಂದ ಅರಸನಿಂದ ಮತ್ತು ದೇವರಿಂದಲೂ ಕೂಡಾ ಶಿಕ್ಷೆಯಂತೂ ನಿಶ್ಚಿತವಾಗಿತ್ತು.

ಬಲುದಿನದ ಹಿಂದೆ, ನಾನು ಈ ರೀತಿಯಾಗಿರುವ ಪ್ರಾಚೀನಕಾಲದ ಬೋಧನೆಯನ್ನು ಓದಿದ್ದೆನು: ಒಬ್ಬ ಮನುಷ್ಯನು ಏನಾದರೂ ಒಳ್ಳೆಯದನ್ನು ತಿಳಿದುಕೊಂಡಿದ್ದರೆ ಅದು ಆತನ ನೆರೆಯವನಿಗೆ ಲಾಭವಾಗಬೇಕಿತ್ತು ಮತ್ತು ಅವನಲ್ಲಿಯೇ ಇಟ್ಟುಕೊಂಡಿದ್ದಾದರೆ, ಕಳ್ಳತನದ ದೋಷವನ್ನು ಆ ಮನುಷ್ಯನು ಹೊರಬೇಕಿತ್ತು. ಉದಾಹರಣೆಗೆ, ತನ್ನ ನೆರೆಯವನ ಕುಟುಂಬಕ್ಕೆ ಆಹಾರದ ಅವಶ್ಯಕತೆಯು ಇದೆ ಎಂದು ಆ ಮನುಷ್ಯನು ತಿಳಿದಿದ್ದಾನೆ ಎಂಬುದನ್ನು ಊಹಿಸಿರಿ. ಇದನ್ನೂ ಸಹ ಊಹಿಸಿರಿ, ಆತನ ನೆರೆಯವನು ಎಲ್ಲಿಂದ ಉಚಿತವಾದ ಗೋಧಿಹಿಟ್ಟನ್ನು ತರಬಹುದು ಎಂಬುದನ್ನು ತಿಳಿದಿದ್ದಾನೆ, ಆದರೆ ಅದರ ಬಗೆಗೆ ಹಂಚಿಕೊಳ್ಳುವಲ್ಲಿ ಆತನು ವಿಫಲನಾಗಿದ್ದಾನೆ. ಈ ಪ್ರಕರಣದಲ್ಲಿ, ಆ ಮನುಷ್ಯನು ತನ್ನ ನೆರೆಯವನಿಂದ ಹಿಟ್ಟನ್ನು ಕದಿಯುವ ಕಳುವಿನ ದೋಷವನ್ನು ಹೊಂದಿದ್ದಾನೆ. ಹೇಗೆಂದರೆ ಆತನ ನೆರೆಯವನ ಮನೆಯಲ್ಲಿ ಪ್ರವೇಶಿಸಿದಂತೆ ಮತ್ತು ಕಳ್ಳತನ ಮಾಡಿದವನ ಹಾಗೆ ಪರಿಗಣಿಸಲ್ಪಡುತ್ತಾನೆ. ಕುಷ್ಠರೋಗಿಗಳು ಸಮಾರ್ಯದ ಜನರಿಗೆ ಆಹಾರದ ಇರುವಿಕೆಯ ಬಗೆಗೆ ಹೇಳದೆ ಹೋಗಿದ್ದರೆ, ಅವರು ಕಳ್ಳರೆಂದು ಪರಿಗಣಿಸಲ್ಪಡುತ್ತಿದ್ದರು.

ಅವರು "ಅರಮನೆಯವರಿಗೆ ಈ ಸಂಗತಿಯನ್ನು ತಿಳಿಸೋಣ" (ವಚನ 9ಸಿ) ಎಂದು ನಿರ್ಧರಿಸಿದರು. ಅವರು ಊರಬಾಗಿಲಿನ ಹತ್ತಿರಹೋದರು ಮತ್ತು ಬಾಗಿಲುಕಾಯುವವರಿಗೆ ತಾವು ಅರಾಮ್ಯರ ಪಾಳೆಯಗಳಲ್ಲಿ ಕಂಡುಕೊಂಡ ಸಂಗತಿಗಳನ್ನು ಗಟ್ಟಿಯಾಗಿ ಕೂಗಿದರು (ವಚನ 10) ಬಾಗಿಲುಕಾಯುವವರು ಈ ಸಂದೇಶವನ್ನು ಅರಮನೆಯವರಿಗೆ ರವಾನಿಸಿದರು (ವಚನ 11).

ಸೇವಕರು ಅರಸನನ್ನು ಎಚ್ಚರಿಸಿದರು (ನೋಡಿರಿ ವಚನ 12ಎ) ಮತ್ತು ಆತನಿಗೆ ವರದಿಯನ್ನು ಕೊಟ್ಟರು. "ಇದು ಎಲೀಷನ ಪ್ರವಾದನೆಯು [7:1] ನಿಜವಾಗಿ ಪರಿಣಮಿಸಿತು" ಎಂದು ಪ್ರತಿಕ್ರಿಯಿಸಿದ್ದರೆ ಅದು ಸ್ತುತ್ಯಾರ್ಹವಾಗಿರುತ್ತಿತ್ತು. ಅದರ ಬದಲಾಗಿ ಆತನು ಈ ವಾರ್ತೆಯು "ನಿಜವಾಗಿದ್ದರೆ ಬಲು ಒಳ್ಳೇಯದಾಗುತ್ತಿತ್ತು" ಎಂದು ಯೋಚಿಸುತ್ತಾನೆ. ಆತನು ತನ್ನ ಸೇವಕನಿಗೆ "ಅರಾಮ್ಯರ ಹಂಚಿಕೆಯನ್ನು ಕುರಿತು ಹೇಳುತ್ತೇನೆ ಕೇಳಿರಿ; ನಾವು ಹಸಿವಿನಿಂದ ಸಾಯುವವರಾಗಿದ್ದೇವೆಂಬುದನ್ನು ಅವರು ಬಲ್ಲರು. ಆದುದರಿಂದ ಪಾಳೆಯವನ್ನು ಬಿಟ್ಟು ಹೋಗಿ ಅಡವಿಯಲ್ಲಿ ಅಡಗಿಕೊಂಡಿದ್ದಾರೆ; ನಾವು ಪಟ್ಟಣದಿಂದ ಹೊರಗೆ ಹೋದಕೂಡಲೆ ನಮ್ಮನ್ನು ಸಜೀವಿಗಳನ್ನಾಗಿಯೇ ಹಿಡಿದು ಪಟ್ಟಣವನ್ನು ಪ್ರವೇಶಿಸ ಬೇಕೆಂದಿದ್ದಾರೆ" (2 ಅರಸು 7:12ಬಿ) ಎಂದು ಹೇಳುತ್ತಾನೆ. ಯೆಹೋಶುವನೂ ಕೂಡ ಈ ರೀತಿಯ ರಣನೀತಿಯನ್ನು ಆಯಿ ಪಟ್ಟಣವನ್ನು ಸೋಲಿಸಲು ಉಪಯೋಗಿಸಿದ್ದನು (ಯೆಹೋಶುವ 8).

ಅರಸನ ಒಬ್ಬ ಸೇವಕನು ಆ ಕಥೆಯು ನಿಜವಾಗಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಅರಸನು ಒಬ್ಬನನ್ನು ಕಳುಹಿಸಬೇಕೆಂದು ಸೂಚಿಸಿದನು. ಆ ಸೇವಕನು "ಒಬ್ಬ ರಾಹುತನು ಪಟ್ಟಣದಲ್ಲುಳಿದಿರುವ ಕುದುರೆಗಳಲ್ಲಿ ನಾಲ್ಕೈದು ಕುದುರೆಗಳನ್ನು ತೆಗೆದುಕೊಂಡು ನೋಡುವುದಕ್ಕೆ ಹೋಗಲಿ" (2 ಅರಸು 7:13ಎ). ಬಹುಶಃ ಪಟ್ಟಣದಲ್ಲಿರುವ ಹೆಚ್ಚಿನ ಕುದುರೆಗಳು ಸತ್ತಿರಬಹುದು (ಮತ್ತು ಬಹುಶಃ ತಿನ್ನಲ್ಪಟ್ಟಿರಬೇಕು). ಆ ಸೇವಕನು ಮುಂದುವರೆಸುತ್ತಾ "ಅವರಿಗೆ [ಕಳುಹಿಸಲ್ಪಟ್ಟ ಮನುಷ್ಯರು] ಪಟ್ಟಣದಲ್ಲುಳಿದಿರುವ ಇಸ್ರಾಯೇಲ್ಯರ ಗತಿಯಾಗಲಿ ಸತ್ತು ಹೋದವರ ಗತಿಯಾಗಲಿ ಸಂಭವಿಸುವದಷ್ಟೇ" (ವಚನ 13ಬಿ) ಎಂದು ಹೇಳಿದನು. ಮೂಲತಹವಾಗಿ, ಆತನು ಈ ರೀತಿ ಹೇಳುತ್ತಿದ್ದನು "ಕಳಿಸ್ಪಲ್ಪಟ್ಟವರಿಗೆ ಬಲು ಕೆಟ್ಟದ್ದು ಸಂಭವಿಸುವುದೇನೆಂದರೆ ಅವರು ಕೊಲ್ಲಲ್ಪಡುವುದೇ ಆಗಿದೆ. ಅವರು ಪಟ್ಟಣದಲ್ಲಿ ಇರುವುದಾದರೂ ಕೂಡ ಅವರು ಸಾಯುವುದೆ, ಆದ್ದರಿಂದ ಅವರನ್ನು ಯಾಕೆ ಕಳುಹಿಸಬಾರದು? ಅದರಿಂದಾಗುವ ಹಾನಿಯಾದರೂ ಏನು?"

ಅಂತಿಮವಾಗಿ "ಎರಡು ಜೋಡಿ ಕುದುರೆಗಳನ್ನು" ಕಳುಹಿಸಲು ನಿರ್ಧರಿಸಿದರು (ವಚನ 14). ಆ ಸವಾರರು ಕುಷ್ಠರೋಗಿಗಳು ಹೇಳಿದಂತೆ ಡೇರೆಯು ಖಾಲಿಯಾಗಿದ್ದುದನ್ನು ಕಂಡರು. ಅವರು ಓಡಿಹೋದ ಅರಾಮ್ಯರ ಸುಳಿಯನ್ನು ಹಿಂಬಾಲಿಸಿದರು, ಒಂದು ಸುಳಿವು ಅವರನ್ನು ಯೊರ್ದನ್ ನದಿಯವರೆಗೆ[6] ನಡೆಸಿತು "ಅವಸರದಿಂದ ಓಡಿಹೋದ ಅರಾಮ್ಯರು ದಾರಿಯಲ್ಲೆಲ್ಲಾ ತಮ್ಮ ಬಟ್ಟೆಗಳನ್ನೂ ಸಾಮಾನುಗಳನ್ನೂ ಬಿಸಾಡಿದ್ದರು" (ವಚನ 15ಬಿ).

ದೂತರು ಹಿಂದುರಿಗಿ ಬಂದು ಅರಸನಿಗೆ ತಿಳಿಸಿದರು (ವಚನ 15ಬಿ). ಶೀಘ್ರವೇ ಈ ಮಾತು ಪಟ್ಟಣದಲ್ಲಿ ಹರಡಿತು, ಮತ್ತು ಲಗುಬಗೆಯಲ್ಲಿ ಧ್ವಾರಗಳು ತೆರೆಯಲ್ಪಟ್ಟವು. "ಜನರು ಹೊರಗೆ ಹೋಗಿ ಅರಾಮ್ಯರ ಪಾಳೆಯವನ್ನು ಸೂರೆಮಾಡಿಬಿಟ್ಟರು" (ವಚನ 16ಎ). ಅವರು ತಿಂದರು ಸಂತೃಪ್ತರಾದರು; ಅವರು ಬಿಡುಗಡೆ ಮಾಡಲ್ಪಟ್ಟಿದ್ದರು! ಅವರ ಬಿಡುಗಡೆಗೆ ಯೆಹೋವನು ಕಾರಣನಾಗಿದ್ದನು, ಆದರೆ ಆತನು ತನ್ನ ಉದ್ದೇಶವನ್ನು ಸಂಪೂರ್ಣಗೊಳಿಸಲು ಅಸಂಗತರಾದ ನಾಲ್ಕು ಅಭ್ಯರ್ಥಿಗಳನ್ನು ಬಳಸಿದ್ದನು: ನಾಲ್ಕು ಜನ ಕುಷ್ಠರೋಗಿಗಳು ಶುಭವಾರ್ತೆಯನ್ನು ಹಂಚಿಕೊಳ್ಳಲು ಸಿದ್ಧರಿದ್ದರು!

## ಶುಭವಾರ್ತೆ ಈಗ

ಅನೇಕ ಅನ್ವಯಗಳನ್ನು ಈ ಕಥೆಯಿಂದ ತೆಗೆದುಕೊಳ್ಳಲಾಗಿದೆ, ಆದರೆ ವಚನ 9ರಲ್ಲಿನ ಕುಷ್ಠರೋಗಿಗಳ ಮಾತುಗಳ ಮೇಲೆ ನಮ್ಮ ವಿಚಾರಗಳನ್ನು ಕೇಂದ್ರಕರಿಸಲು ನಾನು ಬಯಸುವವನಾಗಿದ್ದೇನೆ: "ಇದು ಶುಭವಾರ್ತೆಯ ದಿವಸವಾಗಿದೆ; ನಾವು ಇದನ್ನು ಪ್ರಕಟಿಸದಿರುವದು ಒಳ್ಳೇಯದಲ್ಲ. ಬೆಳಗಾಗುವರೆಗೆ ತಡಮಾಡಿದರೆ ಶಿಕ್ಷೆಗೆ ಪಾತ್ರರಾದೇವು.

ಆದುದರಿಂದ ಹೋಗಿ ಅರಮನೆಯವರಿಗೆ ಈ ಸಂಗತಿಯನ್ನು ತಿಳಿಸೋಣ." ಇದು ನಮ್ಮ ಮತ್ತು ಕುಷ್ಠರೋಗಿಗಳ ಪರಿಸ್ಥಿತಿಗಳ ಮಧ್ಯದಲ್ಲಿನ ಸಮಾನತೆಯನ್ನು ತೋರಿಸಬಹುದು.

**ನಮಗಾಗಿ ಶುಭವಾರ್ತೆ**

ಈ ಪದಪುಂಜದ ಕುಷ್ಠರೋಗಿಗಳ ಹೇಳಿಕೆಯಲ್ಲಿ ನಮಗೆ ಸಿಕ್ಕುವ ಮೊದಲ ಸಂಗತಿ ಎಂದರೆ "ಶುಭವಾರ್ತೆ" "ಸುವಾರ್ತೆ" ಎಂಬ ಪದದ ಅಕ್ಷರ ಸಹ ಅರ್ಥವು "ಶುಭವಾರ್ತೆ" ಎಂಬುದನ್ನು ನೆನಪುಮಾಡಿಕೊಳ್ಳುವಾ. ಸುವಾರ್ತೆಯ ಕೇಂದ್ರವೆಂದರೆ ಕ್ರಿಸ್ತನ ಮರಣ, ಸಮಾಧಿಮಾಡುವಿಕೆ, ಮತ್ತು ಪುನಾರುತ್ಥಾನದ ಕಥೆಯೆ ಆಗಿದೆ (1 ಕೊರಿಂಥ 15:1-4). ನಾವು ಇದನ್ನು "ಇದೆ ಶುಭವರ್ತಮಾನದ ಕಾಲ" ಎನ್ನಬಹುದು: ನಾವು ಕಳೆದುಹೋಗಿದ್ದೆವು, ಆದರೆ ಯೇಸು ತಮ್ಮ ಪಾಪಗಳನ್ನು ತನ್ನ ಮೇಲೆ ತೆಗೆದು ಕೊಂಡು ನಮಗಾಗಿ ಆತನು ಸತ್ತನು (1 ಕೊರಿಂಥ 15:3; 2 ಕೊರಿಂಥ 5:21; ಯೆಶಾಯ 53:6)! ದೈಹಿಕವಾದ ಅವಶ್ಯಕತೆಗಳಿಗೆ ಬೇಕಾದ ಶುಭವರ್ತೆಮಾನವನ್ನು ಕುಷ್ಠರೋಗಿಗಳು ಹೊಂದಿದ್ದರು; ನಮಗಾದರೋ ಆತ್ಮೀಕ ಸಂಗತಿಗಳ ಬಗೆಗೆ ಹಂಚಿಕೊಳ್ಳಲು ಶುಭವರ್ತಮಾನವಿದೆ.

ಅನೇಕ ಸಮಾನತೆಗಳನ್ನು ನಾವು ಇದರಲ್ಲಿ ತೆಗೆದುಕೊಳ್ಳಬಹುದು. ನಾವು ಜಗತ್ತು ಪಾಪದಿಂದ "ತುಂಬಿಕೊಂಡಿದೆ" (ನೋಡಿರಿ ಎಫೆಸ 6:12) ಎಂದು ಯೋಚಿಸಬಹುದು. ಕ್ರಿಸ್ತನಿಲ್ಲದೆ ಇರುವವರು ಆತ್ಮೀಕವಾಗಿ "ಹಸಿದವರು," ಯಾವುದೇ ನಿರೀಕ್ಷೆ ಇಲ್ಲದವರು ಆಗಿರುತ್ತಾರೆ (ನೋಡಿರಿ ಎಫೆಸ 2:12). ಹೇಗೋ, ದೇವರು ತನ್ನ ಕರುಣೆಯಿಂದ, ಮನುಕುಲವನ್ನು ಬಿಡಿಸುವುದನ್ನು ಒದಗಿಸಿದನು (ನೋಡಿರಿ ತೀತ 3:4, 5ಎ; ಅಪೊಸ್ತಲರ ಕೃತ್ಯಗಳು 2:38). ಯೇಸುವಿನ ಮೂಲಕ ಪ್ರತಿಯೊಬ್ಬ ವ್ಯಕ್ತಿಯೂ ಪಾಪದ ಮೇಲೆ ಜಯವನ್ನು ಸಾಧಿಸುವವನಾಗಿರುತ್ತಾನೆ (1 ಕೊರಿಂಥ 15:56, 57). ಆತ್ಮೀಕ ಆಶೀರ್ವಾದದ "ಹಬ್ಬವು" ಪಾಲುತೆಗೆದುಕೊಳ್ಳುವವರಿಗೆಲ್ಲಾ ಸಿಗುವಂತಹದ್ದಾಗಿರುತ್ತದೆ (ನೋಡಿರಿ ಮತ್ತಾಯ 22:9).

ನಾಲ್ಕು ಮಂದಿ ಕುಷ್ಠ ರೋಗಿಗಳಂತೆ Lord's Church ನ ಸದಸ್ಯರಾದ ನಾವು ದೇವರ ವ್ಯವಸ್ಥೆಗಳನ್ನು ಆನಂದಿಸುತ್ತಾ ಇದ್ದೇವೆ. ನಾವು "ಹಸಿವೆಯಿಂದ" ಇರುವುದರಿಂದ "ಸಂತೃಪ್ತತೆಯೆಡೆಗೆ" ಹೋಗುತ್ತಾ ಇದ್ದೇವೆ (ನೋಡಿರಿ ಮತ್ತಾಯ 5:6) ನಾವು ಆತ್ಮೀಕ "ಭಿಕ್ಷುಕರಾಗಿ" ಇರುವುದರಿಂದ "ಶ್ರಿಮಂತಿಕೆಯತ್ತ" ಹೋಗುತ್ತಿದ್ದೇವೆ (ನೋಡಿರಿ 2 ಕೊರಿಂಥ 6:10; ಮತ್ತಾಯ 5:3). ಎಂಥ ಅದ್ಭುತವಾದ ವಾಗ್ದಾನಗಳು ಮತ್ತು ಆಶೀರ್ವಾದಗಳು ನಮ್ಮದಾಗಿವೆ! (ನೋಡಿರಿ ಎಫೆಸ 3:20; ಫಿಲಿಪ್ಪಿ 4:19; ಇಬ್ರಿಯ 7:25.) ನಾವು ಪೌಲನೊಂದಿಗೆ ಹೀಗೆ ಹೇಳಬಹುದು "ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ ಸ್ತೋತ್ರ" (2 ಕೊರಿಂಥ 9:15) - ಆ ವರವು ಆತನ ಮಗನಾಗಿದ್ದಾನೆ!

**ಇತರರಿಗಾಗಿ ಶುಭವಾರ್ತೆ?**

ಇದು ನಮಗಾಗಿ ಇರುವ ಪ್ರಶ್ನೆಯಾಗಿದೆ: ನಾವು ಹೊಂದಿರುವ ಜಗತ್ತಿನಲ್ಲಿ ತ್ವರಿತವಾದ ಯಾವುದೆ ಅವಶ್ಯಕತೆಯನ್ನು ನಾವು ಅರ್ಥಮಾಡಿಕೊಳ್ಳಬಹುದೇ? ಕಳೆದು ಹೋದ ಪಾಪದೊಡನೆಯ ಶುಭವಾರ್ತೆಯನ್ನು ಹಂಚಿಕೊಳ್ಳಲು ನಾವು ವಿಫಲರಾ ದದ್ದಾದರೆ ಕುಷ್ಠರೋಗಿಗಳಂತೆ, "ನಾವು ಮಾಡುತ್ತಿರುವದು ಸರಿಯಲ್ಲ" ಎಂದು ನಾವು ಹೇಳಬಹುದು.

ದುರದೃಷ್ಟಕರವಾದದ್ದೆಂದರೆ, ನಾವು ಯಾವಾಗಲೂ ಇತರರಿಗೆ ಯೇಸುವಿನ ಬಗೆಗಿನ ಶುಭವಾರ್ತೆಯನ್ನು ಹೇಳುವುದಿಲ್ಲ. ಇದು ಯಾಕೆ ಹಾಗೆ ಎಂಬುದು ನನಗೆ ಖಚಿತವಾಗಿಲ್ಲ. ಕೆಲವರು ನಿಜವಾಗಿಯೂ "ಯೆಹೋವನ ಕಾರುಣ್ಯವನ್ನು ಸವಿಯದೇ ಇರುವದು ಸಾಧ್ಯ" (1 ಪೇತ್ರ 2:3); ಇನ್ನೊಂದು ಮಾತಿನಲ್ಲಿ ಅವರು ತಾವೇ ಸ್ವಂತ ರಕ್ಷಣೆಗೊಳಗಾಗಿರುವುದಿಲ್ಲ.

ಅಂದ್ರೇಯನಿಗೆ ಕರ್ತನು ಕಂಡಕೂಡಲೇ ಆತನು ಇತರರಿಗೆ ತಿಳಿಸಲು ಓಡಿಹೋದನು (ಯೋಹಾನ 1:40-42); ಅದು ಸ್ವಾಭಾವಿಕವಾದ ಪ್ರತಿಕ್ರಿಯೆ ಆಗಿದೆ. ಒಬ್ಬನು ಶುಭವಾರ್ತೆಯನ್ನು ಹಂಚಿಕೊಳ್ಳುವ ನಿರ್ಬಂಧವನ್ನು ಮಾಡಿಕೊಂಡರೆ, ಆತನು ದೇವರೊಂದಿಗಿನ ತನ್ನ ಸಂಬಂಧವನ್ನು ಪರೀಕ್ಷಿಸಿಕೊಳ್ಳುವವನಾಗಿರಬೇಕು.

ಇನ್ನೊಂದು ಸಾಧ್ಯತೆಯೆಂದರೆ ನಮ್ಮಲ್ಲಿ ಯಾರೂ ಕರ್ತನು ನಮಗೇನು ಮಾಡಿದ್ದಾನೆ ಎಂಬುದನ್ನು ಪೂರ್ಣವಾಗಿ ಪ್ರಶಂಸಿಸುವುದಿಲ್ಲ (ನೋಡಿರಿ 2 ಪೇತ್ರ 1:9ಬಿ). ಒಂದು ವೇಳೆ ನಾವು ನಿಜವಾಗಿ ಪ್ರಶಂಸಿಸುವವರಾಗಿದರೆ, ನಾವು ಆ ವಾರ್ತೆಯನ್ನು ಹಂಚಿಕೊಳ್ಳುವವರಾಗಿರುತ್ತೇವೆ (ಲೂಕ 8:39)!

ಕೆಲಸಾರಿ ಒಂದು ಶುಭವಾರ್ತೆಯನ್ನು ಹೇಳದೇ ಇರುವದು ಇತರರ ಬಗೆಗಿನ ಕಾಳಜಿಯ ಸೂಚಿಸುವುದಾಗಿದೆ ನಮ್ಮ ನೆರೆಯವನು ದೈಹಿಕವಾಗಿ ಹಸಿವೆಯಿಂದ ಸಾಯುತ್ತಿದ್ದಾನೆ ಎಂದು ನಮಗೆ ತಿಳಿದಿದ್ದರೂ, ಅವನಿಗೆ ಆಹಾರವನ್ನು ನಿರಾಕರಿಸುವಷ್ಟು ಹೃದಯ ಹೀನನು ನಮ್ಮಲ್ಲಿ ಒಬ್ಬನೂ ಇಲ್ಲ. ನಮ್ಮ ಸುತ್ತಲೂ ಇರುವವರು ದೈಹಿಕವಾದ ಹಸಿವೆಯಿಂದ ಸಾಯುತ್ತಿಲ್ಲ, ಆದರೆ ಅವರು ಆತ್ಮೀಕ “ಹಸಿವಿನಿಂದ” ಸಾಯುತ್ತಿದ್ದಾರೆ. ನಾವು ಅಂಥವರಿಗೆ ವಾಕ್ಯದ “ಹಾಲು” ಮತ್ತು “ಮಾಂಸವನ್ನು” ಕೊಡುವುದರಲ್ಲಿ ವಿಫಲರಾದರೆ (1 ಪೇತ್ರ 2:2; ಇಬ್ರಿಯ 5:12; KJV) ಅವರು ನಮ್ಮ ಬಗೆಗೆ ಏನು ಹೇಳಬಹುದು? ನಿಜವಾಗಿಯೂ, “ನಾವು ಮಾಡುತ್ತಿರುವುದು ಸರಿಯಲ್ಲ ಎಂದು.”

ನಮ್ಮ ಸಮಸ್ಯೆಯು ಏನೆಂದರೆ, ನಾವು ಎಲ್ಲೋ ಕ್ರೈಸ್ತತ್ವದ ಆತ್ಮವನ್ನು ತಪ್ಪಿದ್ದೇವೆ. ಆದಿ ಕ್ರೈಸ್ತರು ತಾವು ಭೇಟಿಯಾದಾಗಲೆಲ್ಲಾ ಶುಭವಾರ್ತೆಯನ್ನು ಹಂಚಿಕೊಳ್ಳಲು ಕಾತುರರಾಗಿರುತ್ತಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 5:42; 8:1, 4). ಹಾಗೆ ಮಾಡುವಾಗ, ಅವರು ದೇವರ ನಿಯೋಗದಿಂದ ತುಂಬಿದವರಾಗಿರುತ್ತಿದ್ದರು (ಮತ್ತಾಯ 28:18-20; ನೋಡಿರಿ 10:27).

ಯೇಸುವಿನ ಬಗೆಗೆ ಹೇಳಲು ನಮಗೆ ಅನೇಕ ಕಾರಣಗಳು ಇವೆ, ಕಳೆದು ಹೋದವರ ಬಗೆಗೆ ನಮ್ಮ ಪ್ರೀತಿ ಮತ್ತು ಕರ್ತನಿಗೆ ವಿಧೇಯರಾಗುವ ಇಚ್ಛೆ ಇವುಗಳನ್ನು ಒಳಗೊಂಡಿವೆ. “... ತಡಮಾಡಿದರೆ ಶಿಕ್ಷೆಗೆ ಪಾತ್ರರಾದೇವು” ಎಂಬ ಕುಷ್ಟರೋಗಿಗಳ ಆ ಕಾಳಜಿಯ ಅಂಶವನ್ನೂ ನಾವು ಇದರಲ್ಲಿ ಕೂಡಿಸಬಹುದು. ಯೆಹೆಜ್ಕೇಲ 3:18ರಲ್ಲಿ ಕರ್ತನ ಶಾಂತಚಿತ್ತದ ಹೇಳಿಕೆಯನ್ನು ನಾವು ಕಾಣುತ್ತೇವೆ. “ನಾನು ದುಷ್ಟನಿಗೆ - ನೀನು ಸತ್ತೇ ಸಾಯುವಿ ಎಂದು ನುಡಿಯುವಾಗ ನೀನು ಅವನನ್ನು ಎಚ್ಚರಿಸದೆಯೂ ಅವನು ತನ್ನ ದುರ್ಮಾರ್ಗವನ್ನು ಬಿಟ್ಟು ತನ್ನ ಪ್ರಾಣವನ್ನು ಉಳಿಸಿಕೊಳ್ಳುವಂತೆ ಅವನಿಗೆ ಬುದ್ಧಿ ಹೇಳದೆಯೂ ಇದ್ದರೆ ಆ ದುಷ್ಟನು ತನ್ನ ಅಪರಾಧದಿಂದ ಸಾಯಬೇಕಾಗುವದು ಅವನ ಮರಣಕ್ಕಾಗಿ ನಿನಗೇ ಮುಯ್ಯಿತೀರಿಸುವೆನು.”

ನಿಜವಾಗಿ, ಈ ದಿನವು “ಶುಭವಾರ್ತೆಯ ದಿನ”! ಹಿಂದಿನದನ್ನು ನೆನಿಸಿದರೆ ನಾವು ಸರಿಯಾದುದ್ದನ್ನೇ ಮಾಡಿದ್ದೇವೆ ಯಾಕೆಂದರೆ ನಾವು ಮೌನವಾಗಿದ್ದೇವೆ ಎಂದು ನಾವು ಒಪ್ಪಿಕೊಳ್ಳಬಹುದು; ಆದರೆ ಭವಿಷ್ಯದ ದೃಷ್ಟಿಯಿಂದ ಕುಷ್ಟರೋಗಿಗಳ ಮಾತುಗಳಾದ: “ಆದುದರಿಂದ ಹೋಗಿ ಈ ಸಂಗತಿಯನ್ನು ತಿಳಿಸೋಣ, ಎಂಬುದು ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತಾ ಇರಲಿ!”

## ಮುಕ್ತಾಯ

ಈ ಪಾಠವು ಪ್ರತಿಯೊಬ್ಬ ಕ್ರೈಸ್ತರಿಗೂ ಸುವಾರ್ತೆಯನ್ನು ಶುಭವಾರ್ತೆಯನ್ನು ಹಂಚಿಕೊಳ್ಳಲು ಪ್ರೋತ್ಸಾಹಿಸುವುದನ್ನು ನಿರ್ದೇಶಿಸುವುದಾಗಿದೆ. ನಾವು ಮುಗಿಸುತ್ತಿದ್ದಂತೆ ಕರ್ತನ ಸುವಿಧಗಳ ಪ್ರಯೋಜನಗಳನ್ನು ಇನ್ನೂ ತೆಗೆದುಕೊಳ್ಳದವರಿಗೆ ನಾನು ಒಂದು

ಅನ್ವಯವನ್ನು ಮಾಡಬಯಸುತ್ತೇನೆ. "ನಾವು ಸಾಯುವ ತನಕ ಇಲ್ಲಿಯೇ ಕುಳಿತುಕೊಳ್ಳ ಬೇಕೋ?" (2 ಅರಸು 7:3) ಎಂದು ಹಸಿವೆಯಿಂದ ಊರಹೊರಗೆ ಕೂತಿರುವ ಕುಷ್ಠರೋಗಿಗಳು ಕೇಳಿದರು: "ಅದೇ ರೀತಿಯ ಪ್ರತಿಯೊಂದು ಉಸಿರಿಗೂ ಸಾವಿಗೆ ಹತ್ತಿರ ಮತ್ತು ಹತ್ತಿರವಾಗುತ್ತಾ ಕುಳಿತ್ತಿದ್ದೀರಿ?" ನೀವು ಸಾಯುವವರೆಗೆ ಹಾಗೆ ಕೂಡಬಾರದೆಂದು ನಾನು ನನ್ನ ಹೃದಯದಿಂದ ಪ್ರಾರ್ಥಿಸುವವನಾಗಿದ್ದೇನೆ! ನೀನು ಯೇಸುವಿನಲ್ಲಿ ನಂಬಿಕೆಯನ್ನು ಇಟ್ಟಿದ್ದಾದರೆ (ಯೋಹಾನ 3:16) ಮತ್ತು ನಿನ್ನ ಪಾಪಕ್ಕೆ ಪಶ್ಚಾತ್ತಾಪವನ್ನು ಪಟ್ಟಿದ್ದಾದರೆ (ಲೂಕ 13:3), ಅನನೀಯನು ಸೌಲನಿಗೆ ಬೋಧಿಸಿದಂತೆ "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ" (ಅಪೊಸ್ತಲರ ಕೃತ್ಯಗಳು 22:16) ಎಂದು ನಾನೂ ಕೂಡಾ ಬೋಧಿಸುವವನಾಗಿದ್ದೇನೆ!

---

ಟಿಪ್ಪಣಿಗಳು

[1]ಒಂದು ಯೆಹೂದಿ ಸಂಪ್ರದಾಯವು ಹೇಳುವುದೇನೆಂದರೆ ಇವರು ಗೇಹಜಿ ಮತ್ತು ಆತನ ಮೂವರು ಮಕ್ಕಳು ಆಗಿರಬೇಕು (Adam Clarke, *The Holy Bible with a Commentary and Critical Notes*, vol. 2, *Joshua–Esther* [New York: Abingdon-Cokesbury Press, n.d.], 504; Matthew Henry, *Commentary on the Whole Bible*, ed. Leslie F. Church [Grand Rapids, Mich.: Zondervan Publishing House, 1961], 409). [2]"ಊರ ಹೊರಗೆ" ಇದು ಸಮಾರ್ಯ ಪಟ್ಟಣದ ಹತ್ತಿರದಲ್ಲಿರುವ "ಊರ ಹೊರಗೆ" ಅರಾಮ್ಯರ ಡೇರೆಯನ್ನು ಸೂಚಿಸುವುದಾಗಿದೆ. [3]Warren W. Wiersbe, *Be Distinct* (Colorado Springs, Colo.: Victor, 2002), 55. [4]ಪಂಡಿತರು ಊಹಿಸುವುದೇನೆಂದರೆ ಮುತರೈ ಅಥವಾ ಮುಜುರ್ ಅಥವಾ ಇತರ ಸ್ಥಳವಾಗಿರ ಬಹುದು ಎಂದು. ಪ್ರತಿಯೊಂದು ಭಾಷಾಂತರಗಳಲ್ಲಿ ಪರೀಕ್ಷಿಸಿದಂತೆ "ಐಗುಪ್ತರು" ಎಂದಿದೆ. [5]J. Robert Vannoy, notes on 2 Kings, *The NIV Study Bible*, ed. Kenneth Barker (Grand Rapids, Mich.: Zondervan Publishing House, 1985), 535. [6]ಸೈನ್ಯಕ್ಕೆ ಅರಾಮ್ಯಕ್ಕೆ ಹೋಗಲು ಎರಡು ಮಾರ್ಗಗಳು ಇದ್ದವು: ಅವರು ಉತ್ತರಕ್ಕೆ ಹೋಗಿ ಮತ್ತು ನಂತರ ಪೂರ್ವಕ್ಕೆ ಹೋಗಬಹುದಿತ್ತು, ಅಥವಾ ಅವರು ಪೂರ್ವವನ್ನು ದಾಟಿ ಯೋರ್ದನಿಗೆ ಹೋಗಬಹುದಿತ್ತು ಮತ್ತು ನಂತರ ಉತ್ತರಕ್ಕೆ ಹೋಗಬಹುದಿತ್ತು. ಅವರು ಎರಡನೆಯ ಮಾರ್ಗವನ್ನು ಆರಿಸಿದರು.